ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	557
2	ಸದಸ್ಯರ ಹೆಸರು	ಡಾ.ವೈ ಎ ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
3	ಉತ್ತರಿಸುವ ದಿನಾಂಕ	18.07.2019
4	ಉತ್ತರಿಸುವವರು	ಮಾನ್ಯ ಮುಖ್ಯ ಮಂತ್ರಿಗಳು

	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ದೆಹಲಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವಾಸಿ ಆಯುಕ್ತರ ಹುದ್ದೆ ಸೃಷ್ಟಿ ಆಗಿದ್ದು ಯಾವಾಗ; ಇದುವರೆಗೂ ಯಾವ ಯಾವ ಅಧಿಕಾರಿಗಳು ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ; ಅವರ ಅಧಿಕಾರದ ಅವಧಿ ತಿಳಿಸುವುದು	ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ದೆಹಲಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವಾಸಿ ಆಯುಕ್ತರ ಹುದ್ದೆ ಆರಂಭದಲ್ಲಿ ಏಜೆಂಟ್, ಮೈಸೂರು ಹೌಸ್, ನವದೆಹಲಿ ಎಂದು ದಿನಾಂಕ: 01.06.1963 ರಂದು ಸೃಜನೆಯಾಗಿರುತ್ತದೆ. ತದ ನಂತರದಲ್ಲಿಈ ಹುದ್ದೆಯ ನಾಮನಿರ್ದೇಶನವನ್ನು "ವಿಶೇಷ ಆಯುಕ್ತರು" ಎಂದು 09.12.1964 ರಂದು ಬದಲಾವಣೆಗೊಳಿಸಲಾಗಿದೆ. ಆನಂತರದಲ್ಲಿ ಈ ಹುದ್ದೆಯ ಹೆಸರನ್ನು "ನಿವಾಸಿ ಆಯುಕ್ತರು" ಎಂದು ದಿನಾಂಕ: 11.08.1998 ರಿಂದ ಈವರೆಗೂ ಕರೆಯಲಾಗುತ್ತಿದೆ. ದಿನಾಂಕ: 01.06.1963 ರಿಂದ ಇಲ್ಲಿಯವರೆಗೆ ಕರ್ನಾಟಕ ಭವನದಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳ ವಿವರವನ್ನು ಅನುಬಂದ-1 ರಲ್ಲಿ ಒದಗಿಸಲಾಗಿದೆ.
ಆ	ಆ ಅಧಿಕಾರಿಗಳ ಅವಧಿಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಯಾವ ಯಾವ ಯೋಜನೆಗಳನ್ನು ಕೇಂದ್ರ ಸರ್ಕಾರದ ಜೊತೆ ಸಮಾಲೋಚಿಸಿ ಪರಿಹಾರಗಳನ್ನು ಕಂಡುಕೊಳ್ಳಲಾಗಿದೆ(ವಿವರಗಳನ್ನು ನೀಡುವುದು)	ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ದೆಹಲಿಯಲ್ಲಿ ಕಾರ್ಯನಿರ್ವಹಿಸಿದ ಎಲ್ಲಾ ನಿವಾಸಿ ಆಯುಕ್ತರುಗಳು ಕರ್ನಾಟಕ ಸರ್ಕಾರದ ಪ್ರಸ್ತಾವನೆಗಳನ್ನು ಭಾರತ ಸರ್ಕಾರದಲ್ಲಿ ಅನುಸರಣೆ ಮಾಡಿಕೊಂಡ ಬಂದಿರುತ್ತಾರೆ. ಪ್ರಸ್ತುತ, ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯವರು ಕೇಂದ್ರ ಸರ್ಕಾರದ ಜೊತೆ ಕಳೆದ ಎರಡು ವರ್ಷಗಳಲ್ಲಿ ಅನುಸರಣೆ ಮಾಡಿ ಈ ಕೆಳಕಂಡ ಯೋಜನೆಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಅನುದಾನ ಬಿಡುಗಡೆಗೊಳಿಸಿರುತ್ತಾರೆ. ಸದರಿ ವಿವರಗಳು ಈ ಕೆಳಕಂಡಂತಿವೆ:

		ವರ್ಷ: 2017-18 ಅ) ಪ್ರಸ್ತಾವನೆಗಳ ಅನುಸರಣೆ: ನವದೆಹಲಿಯ ನಿವಾಸಿ ಆಯುಕ್ತರವರ ಕಛೇರಿಯು 2017-18 ನೇ ಸಾಲಿನಲ್ಲಿ ಒಟ್ಟು 101 ಕರ್ನಾಟಕ ಸರ್ಕಾರದ ಪ್ರಸ್ತಾವನೆಗಳನ್ನು ಸ್ವೀಕರಿಸಿ ಅವುಗಳನ್ನು ಕೇಂದ್ರ ಸರ್ಕಾರದೊಂದಿಗೆ ಅನುಸರಣೆ ಮಾಡಲಾಗಿದೆ. ಆ) ಬಿಡುಗಡೆಗಳ ಅನುಸರಣೆ: ನವದೆಹಲಿಯ ನಿವಾಸಿ ಆಯುಕ್ತರವರ ಕಛೇರಿಯು ಭಾರತ ಸರ್ಕಾರದಿಂದ ಹಲವಾರು ಬಿಡುಗಡೆಗಳನ್ನು ಅನುಸರಣೆ ಮಾಡಲಾಗಿದೆ. ನಿವಾಸಿ ಆಯುಕ್ತರ ಕಛೇರಿಯು ಅನುಸರಣೆ ಮಾಡಿದ ಪ್ರಮುಖ ಬಿಡುಗಡೆಗಳ ಕೆಲವು ಉದಾಹರಣೆಗಳೆಂದರೆ: 1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ post Matric ವಿದ್ಯಾರ್ಥಿ ವೇತನ ಅನುದಾನ ಬಿಡುಗಡೆ ಒಟ್ಟು ರೂ.272.77ಕೋಟಿಗಳು. 2. ಮಹಾತ್ಮ ಗಾಂಧಿ ನರೇಗಾ ಯೋಜನೆ ರೂ. 355.14 ಕೋಟಿಗಳು 3. ಪ್ರಧಾನಮಂತ್ರಿ ಆವಾಸ್ ಯೋಜನೆ(ಗ್ರಾಮೀಣ) ರೂ. 188.22 ಕೋಟಿಗಳು 4. ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) ರೂ.1045 ಕೋಟಿಗಳು 5. ಪ್ರಧಾನಮಂತ್ರಿ ಕೃಷಿ ಸಿಂಚಾಯ್ ಯೋಜನೆ ರೂ.368.86 ಕೋಟಿಗಳು 6. ಆಹಾರ ಧಾನ್ಯಗಳು ಒಟ್ಟು ರೂ. 217.4 ಕೋಟಿಗಳು ವರ್ಷ: 2018-19 ಅ) ಪ್ರಸ್ತಾವನೆಗಳು ಅನುಸರಣೆ: ನವದೆಹಲಿಯ ನಿವಾಸಿ ಆಯುಕ್ತರವರ ಕಛೇರಿಯು 2018-19 ನೇ ಸಾಲಿನಲ್ಲಿ ಒಟ್ಟು 211 ಕರ್ನಾಟಕ ಸರ್ಕಾರದ ಪ್ರಸ್ತಾವನೆಗಳನ್ನು ಸ್ವೀಕರಿಸಿ ಅವುಗಳನ್ನು ಕೇಂದ್ರ ಸರ್ಕಾರದೊಂದಿಗೆ ಅನುಸರಣೆ ಮಾಡಲಾಗಿದೆ. ಆ) ಬಿಡುಗಡೆಗಳ ಅನುಸರಣೆ: ನವದೆಹಲಿಯ ನಿವಾಸಿ ಆಯುಕ್ತರವರ ಕಛೇರಿಯ ಭಾರತ ಸರ್ಕಾರದಿಂದ ಹಲವಾರು ಬಿಡಡುಗಳಿಗಳನ್ನು ಅನುಸರಣೆ ಮಾಡಲಾಗಿದೆ. ನಿವಾಸಿ ಆಯುಕ್ತರ ಕಛೇರಿಯು ಅನುಸರಣೆ ಮಾಡಿದ ಪ್ರಮುಖ ಬಿಡುಗಡೆಗಳು ಇಂತಿವೆ.

		1. ರಾಷ್ಟ್ರೀಯ ವಿಪತ್ತು ನಿರ್ವಹಣೆ ಅನುದಾನ ರೂ.959.84 ಕೋಟಿಗಳು 2. ರಾಜ್ಯ ವಿಪತ್ತು ನಿರ್ವಹಣೆ ಅನುದಾನ ರೂ. 288 ಕೋಟಿಗಳು 3. ಮಹಾತ್ಮಗಾಂಧಿ ನರೇಗಾ ಯೋಜನೆ ರೂ. 3040.24 ಕೋಟಿಗಳು 4. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ರೂ.1079.2 ಕೋಟಿಗಳು 5. ಸ್ಮಾರ್ಟ್ ಸಿಟಿಗಳು ರೂ. 134 ಕೋಟಿಗಳು 6. ಅಮೃತ್ ಯೋಜನೆ ರೂ.633.12 ಕೋಟಿಗಳು 7. ಮೂಲ ಅನುದಾನ (ನಗರ ಸ್ಥಳೀಯ ಸಂಸ್ಥೆಗಳು) ರೂ.1040.26 ಕೋಟಿಗಳು. 8. ನಾರಾಯಣಪುರ ಎಡ ಕಾಲುವೆ ಯೋಜನೆ ರೂ. 368.86 ಕೋಟಿಗಳು 9. ಆಹಾರ ಇಲಾಖೆಗೆ ಸಂಬಂಧಿಸಿದಂತೆ ಬಾಕಿ ಸಬ್ಸಿಡಿಗಳು ರೂ.417 ಕೋಟಿಗಳು. ಹಾಗೆಯೇ, ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಯವರೊಂದಿಗೆ ವಾಟ್ಸಪ್ ಗುಂಪನ್ನು ರಚಿಸಿ ಸದರಿ ಅಧಿಕಾರಿಗಳ ಅಗತ್ಯ ಸಹಾಯ ಸಹಕಾರದೊಂದಿಗೆ ಸಮರ್ಪಕ ಸಮನ್ವಯ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.
ಇ	ಇದುವರೆಗೂ ನಿವಾಸಿ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಸರ್ಕಾರಕ್ಕೆ ತೃಪ್ತಿ ಇದೆಯೇ? (ಮಾಹಿತಿ ನೀಡುವುದು)	ತೃಪ್ತಿಕರವಾಗಿರುತ್ತದೆ.

ಸಂಖ್ಯೆ: ಸಿಆಸುಇ 48 ಹೆಚ್‌ಎಂಬಿ 2019

(ಹೆಚ್.ಡಿ. ಕುಮಾರ ಸ್ವಾಮಿ)
ಮುಖ್ಯಮಂತ್ರಿ

ಅನುಬಂಧ-1

ಕರ್ನಾಟಕ ಸರ್ಕಾರ

ನವದೆಹಲಿಗೆ ವರ್ಗಾವಣೆಗೊಂಡ ಕರ್ನಾಟಕದ ವಿಶೇಷ ಆಯುಕ್ತರುಗಳು / ನಿವಾಸಿ ಆಯುಕ್ತರುಗಳ ಪಟ್ಟಿ.

ಕ್ರಮ ಸಂಖ್ಯೆ	ಅಧಿಕಾರಿಯವರ ಹೆಸರು ಶ್ರೀ / ಶ್ರೀಮತಿ	ಹುದ್ದೆ	ಅವಧಿ	
			ಇಂದ	ವರೆಗೆ
೧	ನಾಗೇಂದ್ರ ಬಹದ್ದೂರ್	ಏಜೆಂಟ್, ಮೈಸೂರು ಹೌಸ್, ನವದೆಹಲಿ	01.06.1963	31.10.1964
೨	ಎನ್. ಲಕ್ಷ್ಮಣ್ ರಾವ್	ವಿಶೇಷ ಆಯುಕ್ತರು, ಮೈಸೂರು	09.12.1964	21.07.1966
೩	ಬಿ.ಆರ್.ವರ್ಮಾ	ವಿಶೇಷ ಆಯುಕ್ತರು, ಮೈಸೂರು	22.07.1966	14.06.1969
೪	ಎಸ್.ಸಂಧಿ	ವಿಶೇಷ ಆಯುಕ್ತರು, ಮೈಸೂರು	15.04.1969	24.10.1969
೫	ಎನ್.ಪಿ.ಸಿಂಗ್	ವಿಶೇಷ ಆಯುಕ್ತರು, ಮೈಸೂರು	16.07.1970	31.08.1973
೬	ಎಸ್.ಕೆ.ಘೋಷಲ್	ವಿಶೇಷ ಆಯುಕ್ತರು, ಕರ್ನಾಟಕ	01.11.1973	10.01.1975
೭	ಎಸ್. ಸಂಧಿ	ವಿಶೇಷ ಆಯುಕ್ತರು, ಕರ್ನಾಟಕ	19.01.1975	16.01.1977
೮	ಕೆ.ಕೆ.ಮಿಶ್ರಾ	ವಿಶೇಷ ಆಯುಕ್ತರು, ಕರ್ನಾಟಕ	17.01.1977	11.07.1979
೯	ಜೆ.ಪಿ.ಶರ್ಮಾ	ವಿಶೇಷ ಆಯುಕ್ತರು, ಕರ್ನಾಟಕ	12.07.1979	29.01.1982
೧೦	ಎಸ್.ರಾಮನಾಥನ್	ವಿಶೇಷ ಆಯುಕ್ತರು, ಕರ್ನಾಟಕ	29.01.1982	07.07.1982
೧೧	ಜೆ.ಕೆ.ಅರೋರಾ	ವಿಶೇಷ ಆಯುಕ್ತರು, ಕರ್ನಾಟಕ	08.07.1982	13.05.1983
೧೨	ಶಾಂತನು ಕನ್ಸಲ್	ವಿಶೇಷ ಆಯುಕ್ತರು, ಕರ್ನಾಟಕ	14.05.1983	22.09.1983
೧೩	ತೆರೆಸಾ ಭಟ್ಟಾಚಾರ್ಯ	ವಿಶೇಷ ಆಯುಕ್ತರು, ಕರ್ನಾಟಕ	19.10.1983	25.05.1988
೧೪	ಜಿ.ವಿ.ವಿಶ್ವನಾಥ್	ವಿಶೇಷ ಆಯುಕ್ತರು, ಕರ್ನಾಟಕ	26.05.1988	10.08.1988
೧೫	ಟಿ.ಪಿ.ಇಸ್ಸಾರ್	ನಿವಾಸಿ ಆಯುಕ್ತರು	11.08.1988	31.10.1991
೧೬	ಕೆ.ಪಿ.ಸಿಂಗ್	ನಿವಾಸಿ ಆಯುಕ್ತರು	09.12.1991	31.08.1993
೧೭	ಬ್ರಹ್ಮ ದತ್	ನಿವಾಸಿ ಆಯುಕ್ತರು	01.09.1993	29.12.1994
೧೮	ಶಾಂತನು ಕನ್ಸಲ್	ನಿವಾಸಿ ಆಯುಕ್ತರು	29.12.1994	04.04.1995
೧೯	ಸುಧಾಕರ್ ರಾವ್	ನಿವಾಸಿ ಆಯುಕ್ತರು	19.04.1995	05.06.1995
೨೦	ಧೀರೇಂದ್ರ ಸಿಂಗ್	ನಿವಾಸಿ ಆಯುಕ್ತರು	13.07.1995	09.09.1995
೨೧	ಸುಬೀರ್ ಹರಿ ಸಿಂಗ್	ನಿವಾಸಿ ಆಯುಕ್ತರು	27.10.1995	25.10.1996
೨೨	ಡಾ. ಅನೂಪ್ ಕೆ. ಪೂಜಾರಿ	ನಿವಾಸಿ ಆಯುಕ್ತರು	27.12.1996	13.01.1997
೨೩	ಗೌತಮ್ ಬಸು	ನಿವಾಸಿ ಆಯುಕ್ತರು	11.02.1997	11.06.1997
೨೪	ಕೆ. ಕೆ. ಮಿಶ್ರಾ	ನಿವಾಸಿ ಆಯುಕ್ತರು	12.06.1997	13.07.1997
೨೫	ಅಚಲಾ ಮೌಲಿಕ್	ನಿವಾಸಿ ಆಯುಕ್ತರು	16.07.1997	05.01.1999
೨೬	ವಿ. ಬಾಲಸುಬ್ರಮಣಿಯನ್	ನಿವಾಸಿ ಆಯುಕ್ತರು	06.01.1999	26.12.1999
೨೭	ನೀರಜಾ ರಾಜ್‌ಕುಮಾರ್	ನಿವಾಸಿ ಆಯುಕ್ತರು	17.01.2000	18.09.2001
೨೮	ಸುಧಾಕರ್ ರಾವ್	ನಿವಾಸಿ ಆಯುಕ್ತರು	15.10.2001	19.09.2004
೨೯	ಸುಧೀರ್ ಕುಮಾರ್	ನಿವಾಸಿ ಆಯುಕ್ತರು	20.09.2004	28.07.2008
೩೦	ಅರವಿಂದ್ ಜಿ. ರಿಸ್ಬುಡ್	ನಿವಾಸಿ ಆಯುಕ್ತರು	28.07.2008	31.08.2009
೩೧	ಜಾವೇದ್ ಅಖ್ತರ್	ನಿವಾಸಿ ಆಯುಕ್ತರು	05.11.2009	08.05.2010
೩೨	ಎಂ. ಇಮ್‌ಕೊಂಗ್ಲ ಜಮೀರ್ (ಪ್ರ)	ನಿವಾಸಿ ಆಯುಕ್ತರು	08.05.2010	30.11.2010
೩೩	ವಂದನಾ ಗುರ್ನಾನಿ	ನಿವಾಸಿ ಆಯುಕ್ತರು	01.12.2010	08.11.2015
೩೪	ಅತುಲ್ ಕುಮಾರ್ ತಿವಾರಿ	ನಿವಾಸಿ ಆಯುಕ್ತರು	02.12.2015	15.08.2017
೩೫	ನಿಲಯ ಮಿತಾಶ್	ನಿವಾಸಿ ಆಯುಕ್ತರು	16.08.2017	